ತಂಡದ ಸಂಕೇತ :

# ಕೆಎಲ್ಇ ಕಾನೂನು ಅಕಾಡೆಮಿಯ

ತೃತೀಯ ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ, 6 ಮತ್ತು 7 ಎಪ್ರೀಲ 2019.

## ಗೌರವಾನ್ವಿತ ಭಾರತದ ಸರ್ವೋಚ್ಛ ನ್ಯಾಯಾಲಯ ಇವರ ಸಮ್ಮುಖದಲ್ಲಿ

## ರಿಟ್ ಅರ್ಜಿ ಸಂಖ್ಯೆ 583/2018

1) ನಿರುದ್ಯೋಗ ನಿವಾರಣ್ ಕಾನೂನು ಮಂಚ (ರಿ) ನವಖಾಲಿ ಪಶ್ಚಿಮ ಬಂಗಾಳ

2) ದೇಶ ಉಳಿಸಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಸೇವಾಗ್ರಾಮ, ವರ್ಧಾ

ಹಾಗೂ ಇತರರು

## ವಿರುದ್ಧ

1) ಭಾರತ ಒಕ್ಕೂಟ, ನವದೆಹಲಿ ಹಾಗೂ ಇತರರು

## ಗೌರವಾನ್ವಿತ ಭಾರತದ ಸರ್ವೋಚ್ಛ ನ್ಯಾಯಾಲಯಕ್ಕೆ ವಿಜ್ಞಾಪಣಾ ಸಲ್ಲಿಕೆ

(ಅರ್ಜಿದಾರರ ಪರ ಮನವಿ) -

# ಪರಿವಿಡಿ



| ಅ.ನಂ | ವಿಷಯ | ಪುಟದ ಸಂಖ್ಯೆ | |
|---|---|---|---|
| | | ಇಂದ | ವರೆಗೆ |
| I | ಗ್ರಂಥಗಳು | i | i |
| II | ದೇಶಿಯ ಮತ್ತು ವಿದೇಶಿ ಪ್ರಕರಣಗಳು | ii | ii |
| III | ನ್ಯಾಯಿಕ ವ್ಯಾಪ್ತಿಯ ಹೇಳಿಕೆ | 1 | 2 |
| IV | ಸಂಕ್ಷಿಪ್ತ ವಾಸ್ತವ ಸಂಗತಿ ಹೇಳಿಕೆ | 1 | 2 |
| V | ವಿವಾದಂಶಗಳ ಹೇಳಿಕೆ | 2 | 3 |
| VI | ವಾದ ಮಂಡನೆ (ತರ್ಕ ಮಾಡುವಿಕೆ) ಸಾರಾಂಶ | 3 | 4 |
| VII | ಮುಂದುವರೆದ ವಾದ ಮಂಡನೆ | 5 | 5 |
| VIII | ಭಾರತ ಒಕ್ಕೂಟದ ವಿರುದ್ಧ ದಾಖಲಿಸಿರುವ ರಿಟ್ ಅರ್ಜಿ ಕಾನೂನುಬದ್ಧ ವಿಚಾರಣಾರ್ಹವಾಗಿರುತ್ತದೆ. | 5 | 5 |
| ಅ) | ಪರ್ಯಾಯ ಪರಿಹಾರದ ಕೊರತೆ | 5 | 5 |
| ಬ) | ಮಾನವ ಮೂಲಭೂತ ಹಕ್ಕುಗಳ ಉಲ್ಲಂಘನೆ | 6 | 6 |
| ಕ) | ಸಂವಿಧಾನ ಬದ್ಧತೆ | 7 | 7 |
| IX | ನ್ಯಾಯಾಲಯವು ಇಂಥ ರಿಟ್ ಅರ್ಜಿ ವಿಚಾರಣೆಯ ನ್ಯಾಯಿಕ ವ್ಯಾಪ್ತಿ ಹೊಂದಿರುತ್ತದೆ. | 7 | 7 |
| ಅ) | ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪಿ | 7 | 7 |
| ಬ) | ಅಸಲು ಅಧಿಕಾರವ್ಯಾಪ್ತಿ ಅನುಚ್ಛೇದ 131. | 8 | 8 |
| ಕ) | ರಿಟ್ ನಿರ್ದೇಶನಗಳ ಪರಿಹಾರ ನೀಡುವ ವ್ಯಾಪ್ತಿ. | 8 | 8 |
| X | ರಿಟ್ ಅರ್ಜಿ ಸಾರ್ವಜನಿಕ ಹಿತಾಸಕ್ತಿ ಹೊಂದಿರುತ್ತದೆ. | 9 | 9 |
| ಅ) | ಅಹವಾಲು ಹೇಳಿಕೊಳ್ಳುವ ಹಕ್ಕು. | 9 | 9 |
| ಬ) | ಸಾರ್ವಜನಿಕ ಹಿತಾಸಕ್ತಿ | 9 | 10 |
| XI | ಸುಸ್ಥಿರ ಭಾರತ ಪುನರ್ ಸ್ಥಾಪನಾ ಅಧಿನಿಯಮ ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನಿರ್ದೇಶನ ನೀಡಬಹುದು. | 11 | 11 |
| | ಪ್ರಾರ್ಥನೆ | 12 | 12 |

## ಸಂಕೇತಾಕ್ಷರ

| | | |
|---|---|---|
| ಎಸ್.ಸಿ | : | ಸರ್ವೋಚ್ಚ ನ್ಯಾಯಾಲಯ |
| ಎ.ಆಯ್.ಆರ್ | : | ಆಲ್ ಇಂಡಿಯಾ ರಿಪೋರ್ಟರ್ |
| ಎಸ್.ಸಿ.ಸಿ | : | ಸರ್ವೋಚ್ಚ ನ್ಯಾಯಾಲಯದ ಪ್ರಕರಣ |
| ಯು.ಎಸ್. | : | ಯುನೈಟೆಡ್ ಸ್ಟೇಟ |

# ಗ್ರಂಥ ಋಣ

| ಅ. ನಂ. | ಗ್ರಂಥಗಳು | ಲೇಖಕರು | ಮುದ್ರಣ ಮತ್ತು ಪ್ರಕಟಣೆ |
|---|---|---|---|
| 1. | ಭಾರತೀಯ ಸಂವಿಧಾನ ತಿದ್ದುಪಡಿ ಮತ್ತು ನ್ಯಾಯಿಕ ಅರ್ಥ ವಿವರಣೆಯೊಂದಿಗೆ | ಎಸ್. ಶರಣಪ್ಪ. | 2016 |
| 2. | ಭಾರತೀಯ ಸಂವಿಧಾನ ಕಾನೂನು | ವಿರಣ್ಣ ಕೆ, ಯಂಡಿಗೇರಿ. | 2ನೇ ಆವೃತ್ತಿ –2017. |
| 3. | ಸಾರ್ವಜನಿಕ ಹಿತಾಸಕ್ತಿ, ವ್ಯಾಜ್ಯಗಳು ಕಾನೂನು ನೆರವು ಹಾಗೂ ಪೂರಕ ಸೇವೆಗಳು. | ವಿಜಯಾದೇವಿ ರಾ. ಓಂಕಾರ | ಪ್ರಥಮ ವೃತ್ತಿ– 2000 |
| 4. | ಭಾರತದ ಸಂವಿಧಾನ | ಡಾ॥ ಎಂ.ಎಂ.ಬಡ್ಡಿ | 2005 |
| 5. | ಭಾರತೀಯ ಸಂವಿಧಾನ ತಿದ್ದುಪಡಿ ಮತ್ತು ನ್ಯಾಯಿಕ ಅರ್ಥ ವಿವರಣೆಯೊಂದಿಗೆ | ಯಡಿಯೂರಪ್ಪ ತುಮಕೂರ. | ಆವೃತ್ತಿ –1950 ರಿಂದ 2008, 94ನೇ ತಿದ್ದುಪಡಿ– 2006ರವರೆಗೆ |

## ದೇಶಿಯ ಪ್ರಕರಣಗಳು

| | |
|---|---|
| 1. | ಓಲ್ಗಾ ಟೆಲಿಸ್ಸ ವಿ. ಬಾಂಬೆ ಮುನ್ಸಿಪಲ್ ಕಾರ್ಪೋರೇಶನ ಎಐಆರ್ 1986 ಎಸ್‌ಸಿ 180 |
| 2. | ಕೆ.ತಿಮ್ಮಪ್ಪ ವಿ. ಕೇಂದ್ರ ಸಮಿತಿ ನಿರ್ದೇಶಕರು ಎಸ್.ಬಿ.ಆಯ್ ಎಐಆರ್ 2001 ಎಸ್.ಸಿ 467 |
| 3. | ಎಲ್ಕೆಟ್ರಿಕಲ್ ಕನಸ್ಟ್ರಕ್ಷನ ಲಿಮಿಟೆಡ್ ವಿ. ಎಸ್.ಸಿ ಬೋಸ |
| 4. | ಪರ್ಟಿಲೈಸರ ಕಾರ್ಪೋರೇಶನ ಕಾಮಗಾರ ಸಂಘ ವಿ. ಭಾರತ ಒಕ್ಕೂಟು ಎಐಆರ್ 1981 ಎಸ್.ಸಿ.344 |
| 5. | ರಂಜನ ದ್ವಿವೇದಿ ವಿ. ಭಾರತ ಒಕ್ಕೂಟು ಎಐಆರ್ 1983 ಎಸ್.ಸಿ 224 |
| 6. | ಎ.ಕೆ. ಪಾಂಡೆ ವಿ. ಪಶ್ಚಿಮ ಬಂಗಾಳ ರಾಜ್ಯ ಎಐಆರ್ 2004 ಎಸ್.ಸಿ 280. |
| 7. | ಎಸ್.ಪಿ. ಗುಪ್ತಾ ವಿ. ಭಾರತ ಒಕ್ಕೂಟು ಎಐಆರ್ 1982 ಎಸ್.ಸಿ. 149 |
| 8. | ಎಮ್.ಸಿ. ಮೇಹತಾ ವಿ. ಭಾರತ ಒಕ್ಕೂಟು ಎಐಆರ್ 1987 ಎಸ್.ಸಿ 1087 |

## ವಿದೇಶಿ ಪ್ರಕರಣ

ಮೂನ್ ವಿ. ಹೀಲಿಯಸ್ 1897 ಯು.ಎಸ್. 113

**ನ್ಯಾಯಿಕ ವ್ಯಾಪ್ತಿಯ ಹೇಳಿಕೆ:**
ರಿಟ್ ಅರ್ಜಿದಾರರು, ಗೌರವ ಪೂರ್ವಕವಾಗಿ ಘನ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯ ಜ್ಞಾಪಕ ಪತ್ರವನ್ನು ಸಲ್ಲಿಸಿದ್ದು, ಈ ಮೂಲಕ ಅರ್ಜಿದಾರರು ಸಂವಿಧಾನದ ಅನುಚ್ಛೇಧ 32 ರಡಿಯಲ್ಲಿ ಮಾನ್ಯ ಘನ ನ್ಯಾಯಾಲಯದಕ್ಕೆ ಸದರಿ ರಿಟ್ ಅರ್ಜಿಯನ್ನು ವಿಚಾರಣೆ ನಡೆಸುವ ನ್ಯಾಯಿಕ ವ್ಯಾಪ್ತಿ ಹೊಂದಿರುತ್ತದೆ.

**ಪ್ರಸಕ್ತ ಪ್ರಕರಣದ ವಾಸ್ತವಿಕ ಸಂಗತಿಯ ಹೇಳಿಕೆ:**
1) ಅರ್ಜಿದಾರರು, ನೊಂದಾಯಿತ ಸಂಸ್ಥೆ ಹೊಂದಿದವರಾಗಿದ್ದು, ದೇಶದ ಆಂತರಿಕ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಭ್ರಷ್ಟಾಚಾರ ಮತಾಂದತೆ ಮತ್ತು ಪ್ರಾದೇಶಿಕತೆ ಕುರಿತು ಪರಿಹಾರ ಕಂಡುಕೊಳ್ಳುವ ಮತ್ತು ಸಲಹೆಗಳನ್ನು ನೀಡುವ ಕಾರ್ಯವನ್ನು ಮಾಡುತ್ತೀರುತ್ತದೆ.
2) ಕಳೆದ 7 ದಶಕಗಳಿಂದಲೂ ಪ್ರಯತ್ನಿಸಿದರೂ ಸಹ ಭಾರತ ಒಕ್ಕೂಟಕ್ಕೆ ನಿರೂದ್ಯೋಗವನ್ನು ಸಂಪೂರ್ಣವಾಗಿ ನಶಿಸಿಹಾಕಲು ಕಷ್ಟಸಾಧ್ಯವಾಗಿರುವದನ್ನು ಕಂಡು ದೇಶದಲ್ಲಿನ ನಿರೂದ್ಯೋಗವನ್ನು ಹೋಗಲಾಡಿಸಿ ಯುವಕರಲ್ಲಿ ಜಾಗೃತ ಮೂಡಿಸಲು ಹಾಗೂ ಮೊಬೈಲ್ ಮತ್ತು ಸಾಮಾಜಿಕ ಜಾಲತಾನಗಳಲ್ಲಿ ಮಗ್ನರಾಗಿರುವ ಯುವಕರನ್ನು ಎಚ್ಚರಿಸುವ ಹಿತದೃಷ್ಟಿಯಿಂದ ಮತ್ತು ಅಂತಹ ಯುವಕರನ್ನು ಸಮಾಜಾಭಿಮುಖಿಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕಾರ್ಯಪ್ರವರ್ತವಾಗಿರುತ್ತದೆ.

3) ಅರ್ಜಿದಾರ ಸಂಸ್ಥೆಗಳು ಸಂಘಟಿಸಿದ ರಾಷ್ಟ್ರೀಯ ಚಿಂತನೆಯಲ್ಲಿ ಇಂದಿನ ಶಿಕ್ಷಣ ಪದ್ದತಿಯು ಪ್ರವೃತ್ತಿಯನ್ನು ಬೆಳಸುತ್ತಿದೆಯೇ ಹೊರತು, ಸ್ವಾವಲಂಬನೆಯ ಬದುಕನ್ನಾಲ್ಲಾ ಹಾಗೂ ಅವಲಂಬನೆಯ ಮಾನಸಿಕತೆಯನ್ನು ರೂಡಿಸಿಕೊಳ್ಳುತ್ತೀರುವದು. ಸ್ವಾತಂತ್ರ್ಯ ನಂತರವು ಸಹ ವಸಹಾತು ನೀತಿಯ ಶಿಕ್ಷಣ ವಾತಾವರಣದಲ್ಲಿಯೇ ಮುಂದುವರೆಯುತ್ತಿರುವುದು ಶೋಚನಿಯ ಎಂಬ ಸಂಗತಿಗಳು, ರಾಷ್ಟ್ರೀಯ ಚಿಂತನೆಯಲ್ಲಿ ಹೊರಹೊಮ್ಮಿರುತ್ತವೆ. ನಮ್ಮ ಶಿಕ್ಷಣ ವ್ಯವಸ್ಥೆಯು ನಿರೂದ್ಯೋಗ ನಿರ್ಮಾಣದ ಬೃಹತ ಕಾರಖಾನೆಯಂತಾಗಿದೆ. ನಮ್ಮ ಶಿಕ್ಷಣ ಶ್ರಮದ ಮಹತ್ವವನ್ನು ವಿದ್ಯಾವಂತರು, ಶ್ರಮೀಕರಾಗದೆ, ಸುಲಭವಾಗಿ ಆದಾಯ ತರುವ ಉದ್ಯೋಗವನ್ನು ಶೋಧಿಸುತ್ತಿದ್ದಾರೆ. ಇದರ ಪರಿಣಾಮುವಾಗಿ ನಗರಗಳತ್ತ ಮುಖಮಾಡಿ ಗ್ರಾಮಗಳನ್ನು ಅನಾಥಶ್ರಮಗಳಾಗುವಂತೆ ನಿರ್ಮಾಣವಾಗುವ ಸ್ಥಿತಿಗೆ ತಲುಪಿದ್ದಾರೆ.

4) ದೇಶದಲ್ಲಿ ಯಂತ್ರ ನಾಗರಿಕತೆಯ ಗುಲಾಮರಾಗಿರುವುದು ನಿವೃತ್ತಿಯ ನಂತರ ನೌಕರರು ಮರುಸೇವೆಗೆ ಸೇರಿಕೊಳ್ಳುತ್ತೀರುವುದು ನಿರೂದ್ಯೋಗವನ್ನು

ಗಣನೀಯವಾಗಿ ಹೆಚ್ಚಿಸಿದೆ. ನಿವೃತ್ತರು ನಿವೃತ್ತಿವೇತನದ ಜೊತೆಗೆ ಮರುಸೇವೆಗೆ ಸೇರಿ ಮತ್ತೊಂದು ವೇತನ ಪಡೆದುಕೊಳ್ಳುವರೊಂದಿಗೆ ಯುವಕರನ್ನು ಅವಕಾಶ ವಂಚಿತರನ್ನಾಗಿಸಿದ್ದಾರೆ.

ಈ ಎಲ್ಲ ವಿಷಯಗಳ ಗಂಭೀರ ಚರ್ಚೆಯ ನಂತರ ಈ ಕೆಳಕಂಡ ಪರಿಹಾರಗಳು ಸೂಚಿಸಲ್ಪಟ್ಟವು. ಅವುಗಳೆಂದರೆ:

ಅ) ಇಂದಿನ ಶೈಕ್ಷಣಿಕ ವ್ಯವಸ್ಥೆ ಸಾಮಾಜಿಕ ಆರ್ಥಿಕ ಅವಶ್ಯಕತೆಗಳಿಗೆ ವಿಮುಖವಾಗುತ್ತಿದ್ದು, 10ನೇ ತರಗತಿಯ ಶಿಕ್ಷಣದ ವ್ಯವಸ್ಥೆಯನ್ನು ನಿಯಂತ್ರಿಸಿ ಏಕರೂಪದ ಶಿಕ್ಷಣ ನೀತಿಯನ್ನು ಕಕ್ಷಿಯಲ್ಲಿ ತರುವುದು.

ಬ) ಕೃಷಿ ಅಭಿವೃದ್ಧಿಗೆ ಮಾರುಕಟ್ಟೆ ಮತ್ತು ಬೆಲೆಗಳು ಪ್ರಮುಖ ಅಡತಡೆಗಳಾಗಿದ್ದು, ಕೃಷಿ ಉತ್ಪನಗಳಿಗೆ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ, ಕನಿಷ್ಠ ಬೆಲೆ ನಿಗದಿಗೊಳಿಸುವದು.

ಕ) ಎಲ್ಲ ರೀತಿಯ ನೌಕರರಿಗೆ ನಿಗಧಿತ ವೇತನ ವರಿಷ್ಠರಿಗೆ ಇತ್ಯಾದಿ ಸೌಲಭ್ಯಗಳನ್ನು ಹಿಂಪಡೆದು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೀಡಲಾಗುವ ಸಂಭಾವನೆ ನಿಗಧಿಗೊಳಿಸುವದು. ಇತರರಿಗಾಗಿ ಸಂವಿಧಾನದ ದ್ಯಯೆವಾದ ಸಮಾನತೆ ಸಕಾರಗೊಳಿಸುವದು.

ಡ) ಗ್ರಹ ನತ್ತು ಕರಕುಶಲ ಉದ್ಯೋಮಿಗಳಲ್ಲಿನ ಉದ್ಯೋಗಕ್ಕೆ ಮಾರಕವಾಗಿರುವ ಯಂತ್ರಗಳನ್ನು ನಿಷೇಧಿಸಿ ಇಂಥ ಉದ್ಯಮಿಗಳಿಗೆ ಆರ್ಥಿಕ ಸಹಾಯ ಮಾರುಕಟ್ಟೆಗಳ ಬೆಂಬಲ ಬೆಲೆ ವ್ಯವಸ್ಥೆ ಮಾಡುವದು.

ಈ ಎಲ್ಲ ಕ್ರಮಗಳು ಜಾರಿಗೊಳಿಸುವದು. ಸರ್ಕಾರದ ಆದ್ಯ ಕರ್ತವ್ಯವಾಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರ ಸಂಸ್ಥೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಈ ಕುರಿತಾಗಿ ಮನವಿ ಸಲ್ಲಿಸಿದರು ಯಾವುದೇ ಫಲಿತಾಂಶ ಉಪಲಬ್ಧವಾಗಿರುವುದಿಲ್ಲ. ಹಾಗಾದ್ದರಿಂದ, ಅರ್ಜಿದಾರ ಸಂಸ್ಥೆಯು ಈ ಎಲ್ಲ ಸಂಗತಿಗಳನ್ನು ಪರಿಗಣಿಸಿ ಹಾಗು ಪರಿಹಾರಾತ್ಮಕ ಕ್ರಮಗಳನ್ನು ಸಾಕಾರಗೊಳಿಸಲು **"ಸುಸ್ಥಿರ ಭಾರತ ಮನರ್‌ಸ್ಥಾಪನಾ ಅಧಿನೀಯಮ"** ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನಿರ್ದೇಶನ ನೀಡುವಂತೆ ಕೋರಿ ಈ ರಿಟ್ ಅರ್ಜಿಯನ್ನು ಗೌರವಾನ್ವಿತ ನ್ಯಾಯಾಲಯದ ಮುಂದೆ ದಾಖಲಿಸಲಾಗಿದೆ.

**ವಿವಾದಾಂಶಗಳ ಹೇಳಿಕೆ:**

I) ಭಾರತ ಒಕ್ಕೂಟದ ವೀರುದ್ಧ ದಾಖಲಿಸಿರುವ ರೀಟ್ ಅರ್ಜಿ ಕಾನೂನು ಬದ್ಧವೆ? ವಿಚಾರಣಾರ್ಹವೆ?

II)ನ್ಯಾಯಾಲಯವು ಇಂಥಹ ರಿಟ್ ಅರ್ಜಿ ವಿಚಾರಣೆಯ ನ್ಯಾಯಿಕ ವ್ಯಾಪ್ತಿ ಹೊಂದಿದೆಯೆ?

III)ರಿಟ್ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆಯೆ?

IV) ಸುಸ್ಥಿರ ಭಾರತ ಪುನ್ ಸ್ಥಾಪನಾ ಅಧಿನೀಯಮ ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನಿರ್ದೇಶನ ನೀಡಬಹುದೆ?

<u>ವಾದ ಮಂಡಣೆಯ ಸಾರಾಂಶ:</u>

**I) ಭಾರತ ಒಕ್ಕೂಟದ ವಿರುದ್ಧ ದಾಖಲಿಸಿರುವ ರಿಟ್ ಅರ್ಜಿ ಕಾನೂನುಬದ್ಧವೆ ಅಥವಾ ವಿಚಾರಣಾರ್ಹವೆ?**

ಅರ್ಜಿದಾರ ಸಂಸ್ಥೆಯು ದಾಖಲಿಸಿರುವ ರಿಟ್ ಅರ್ಜಿಯ ಕಾನೂನು ಬದ್ಧವಾಗಿದ್ದು, ಮಾನ್ಯ ನ್ಯಾಯಾಲಯದ ಮುಂದೆ ವಿಚಾರಣಾರ್ಹವಾಗಿರುತ್ತದೆ.

ಕಾರಣ: ಭಾರತ ಸಂವಿಧಾನದ ಭಾಗ III ರಲ್ಲಿ ನೀಡಿದ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಯೋಗ್ಯ ಕಾನೂನಿನ ಕ್ರಮದ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳಲು ಅನುಚ್ಛೇಧ-32 ಖಂಡ 1 ಖಾತ್ರಿಪಡಿಸುತ್ತದೆ. ಎರಡನೇಯದಾಗಿ ಅನುಚ್ಛೇದ 32 ಖಂಡ 2 ಸರ್ವೋಚ್ಚ ನ್ಯಾಯಾಲಯವು ನಿರ್ದೇಶನಗಳನ್ನು ಆದೇಶಗಳನ್ನು ಅಥವಾ ಹೇಬೀಯಸ್ ಕಾರ್ಪಸ್, ಮ್ಯಾಂಡಮಸ್, ಪ್ರೋಹಿಬೀಷನ್, ಕೋವಾರ್ಂಟೊ ಮತ್ತು ಸರ್ಷಿರ್ಯೊರರಿ ಸ್ವರೂಪದ ರಿಟ್‌ಗಳಲ್ಲಿ ಯಾವುದು ಸಮುಚಿತವೋ ಅದನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು, ಹಾಗಾದ್ದರಿಂದ ಅರ್ಜಿದಾರರು ದಾಖಲಿಸಿರುವ ರಿಟ್ ಅರ್ಜಿಯು ಕಾನೂನುಬದ್ಧ ವಿಚಾರಣಾರ್ಹವಾಗಿರುತ್ತದೆ.

**<u>II) ನ್ಯಾಯಾಲಯವು ಇಂಥಹ ರಿಟ್ ಅರ್ಜಿ ವಿಚಾರಣೆಯ ನ್ಯಾಯಿಕ ವ್ಯಾಪ್ತಿ ಹೊಂದಿರುತ್ತದೆಯೆ?</u>**

-ಅರ್ಜಿದಾರ ಸಂಸ್ಥೆ ದಾಖಲಿಸಿರುವ ರಿಟ್ ಅರ್ಜಿಯ ವಿಚಾರಣೆ ಮಾಡುವ ನ್ಯಾಯಿಕ ವ್ಯಾಪ್ತಿಯನ್ನು ಹೊಂದಿರುತ್ತದೆ. ಕಾರಣ ಸಂವಿಧಾನವು ಸರ್ವೋಚ್ಚ ನ್ಯಾಯಾಲಯಕ್ಕೆ ವಿಶಾಲವಾದ ನ್ಯಾಯಿಕ ವ್ಯಾಪ್ತಿಯನ್ನು ನೀಡುತ್ತದೆ. ಸಂವಿಧಾನದ ಅನುಚ್ಛೇಧ 32ರ ಅನ್ವಯ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡಿ ಯಾವುದೇ ವ್ಯಕ್ತಿಯ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ ಮತ್ತು ಅವನು ಸರ್ವೋಚ್ಚ ನ್ಯಾಯಾಲಯಕ್ಕೆ ಪರಿಹಾರ ನೀಡಲು ಕೊರಬಹುದಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯು ಮೂಲ ನ್ಯಾಯಿಕ ವ್ಯಾಪ್ತಿ ಅನುಚ್ಛೇಧ 131 ರಡಿಯಲ್ಲಿ ಚಲಾಯಿಸಬಹುದೆಂದು ವಿವರಿಸುತ್ತಿದೆ. ಹಾಗಾದ್ದರಿಂದ ಸದರಿ ರಿಟ್ ಅರ್ಜಿಯನ್ನು ವಿಚಾರಣೆ ಮಾಡುವ ನ್ಯಾಯಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

**<u>III)ರಿಟ್ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆಯೇ?</u>**

ರಿಟ್ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಹೊಂದಿರುತ್ತದೆ. ಕಾರಣ ಮೊದಲನೆಯದಾಗಿ ಅರ್ಜಿದಾರ ಸಂಸ್ಥೆ ನೊಂದಾಯಿತ ಸಂಸ್ಥೆಯಾಗಿದ್ದು, ಸಮಾಜ ಸೇವೆಯಲ್ಲಿ ದೇಶದ ಹಿತಾಸಕ್ತಿಯ ನಿಟ್ಟಿನಲ್ಲಿ ಕಾರ್ಯಪ್ರವರ್ತವಾಗಿರುತ್ತದೆ.

ಎರಡನೆಯದಾಗಿ "ಅಹವಾಲು ಹೇಳಿಕೊಳ್ಳುವ ಹಕ್ಕು" ಈ ಪದವನ್ನು ವಿಚಾರಿಸಲ್ಪಡುವ ಹಕ್ಕು ಎಂದು ಅರ್ಥೈಸಲಾಗುತ್ತದೆ. ಅಂದರೆ ಒಂದು ಅಧಿನಿಯಮವನ್ನಾಗಲಿ, ಒಂದು ಆದೇಶವನ್ನಾಗಲಿ ಅಥವಾ ಒಂದು ನಿರ್ಣಯನ್ನಾಗಲಿ ಹಿತಾಸಕ್ತಿಯುಳ್ಳ ವ್ಯಕ್ತಿಯೊಬ್ಬ ಪ್ರಶ್ನಿಸುವ ಕಾನೂನುಬದ್ಧ ಸಾಮರ್ಥ್ಯವನ್ನು ಅಹವಾಲು ಹೇಳಿಕೊಳ್ಳುವ ಹಕ್ಕು ಎಂದು ಹೇಳಲಾಗುತ್ತದೆ. ಸಂವಿಧಾನದ ಅನುಚ್ಛೇಧ 32 ರಡಿಯಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಹೊಂದಿದ ಯಾರೇ ಆಗಲಿ ಒಂದು ವ್ಯಕ್ತಿಯ ಪರವಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹಾಗಾದ್ದರಿಂದ ಸದರಿ ರಿಟ್ ಅರ್ಜಿಯಲ್ಲಿ ಅರ್ಜಿದಾರ ಸಂಸ್ಥೆಯು ದೇಶದ ಬೃಹತ್ ನಿರುದ್ಯೋಗಿಗಳ ಧ್ವನಿಯಾಗಿ ಅವರ ಹಿತಾಶಕ್ತಿಯನ್ನು ಸಂರಕ್ಷಿಸುವದಕ್ಕೆ ಈ ರಿಟ್ ಅರ್ಜಿಯನ್ನು ದಾಖಲಿಸಿರುತ್ತದೆ.

**IV) ಸುಸ್ಥಿರ ಭಾರತ ಪುನರ್ ಸ್ಥಾಪನಾ ಅಧಿನಿಯಮ ಜಾರಿಗಿಳಿಸುವಂತೆ ಭಾರತ ಒಕ್ಕುಟಕ್ಕೆ ನಿರ್ದೇಶನ ನೀಡಬಹುದೆ?.**

ಸುಸ್ಥಿರ ಭಾರತ ಪುನರ್ ಸ್ಥಾಪನಾ ಅಧಿನಿಯಮ ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನ್ಯಾಯಾಲಯ ನಿರ್ದೇಶನ ನೀಡಬಹುದಾಗಿದೆ. ಕಾರಣ ಸರ್ವೋಚ್ಚ ನ್ಯಾಯಾಲಯವು ಭಾರತ ಸಂವಿಧಾನದ ರಕ್ಷಕ ಎಂದು ಕರೆಯಲ್ಪಡುತ್ತದೆ. ಮೊದಲನೆಯದಾಗಿ **ನ್ಯಾಯಿಕ ಕ್ರಿಯಾಶೀಲತೆ** ಅಡಿಯಲ್ಲಿ ಯಾವಾಗ ಸಂವಿಧಾನ ಪ್ರದತ್ತವಾದ ಉಪಲಬ್ಧವಿರುವ ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ಚಾಟಿ ಬೀಸುವ ಅಧಿಕಾರವನ್ನು ಹೊಂದಿರುತ್ತದೆ.

ಎರಡನೆಯದಾಗಿ ಸಂವಿಧಾನದ ಪ್ರಸ್ತಾವಣೆಯಲ್ಲಿ ಉಲ್ಲೇಖಿಸಿರುವಂತೆ ಸಾಮಾಜಿಕ ನ್ಯಾಯದ ಈಡೇರಿಸುವಿಕೆಗಾಗಿ ಸರ್ಕಾರಕ್ಕೆ ಎಚ್ಚರಿಕೆಯ ನಿರ್ದೇಶನ ನೀಡುವ ನಿರ್ದೇಶನಾತ್ಮಕ ಅಧಿಕಾರವನ್ನು ನ್ಯಾಯಾಲಯವು ಹೊಂದಿರುತ್ತದೆ. ಮೂರನೆಯದಾಗಿ ಆರ್ಥಿಕ ಸಬಲತೆ ಸ್ಥಿರತೆ ಇಲ್ಲದೆ ಸಾಮಾಜಿಕ ನ್ಯಾಯ ಕನಸು ಮಾತ್ರ. ಜೀವಿಸುವ ಹಕ್ಕು ಮೂಲಭೂತ ಹಕ್ಕಾಗಿದ್ದು, ಜೀವಿಸಲು ಆಹಾರವು ಅವಶ್ಯ. ಆಹಾರ ಪಡೆಯಲು ಆರ್ಥಿಕ ಸಬಲತೆಯಿಂದ ಮಾತ್ರ ಸಾಧ್ಯ ಹಾಗು ಆರ್ಥಿಕ ಸಬಲತೆಯು ಉದ್ಯೋಗಗಳಿಂದ ಮಾತ್ರ ಪ್ರಾಪ್ತವಾಗುತ್ತದೆ. ಹಾಗಾದ್ದರಿಂದ, ಸಂವಿಧಾನದ ಪಿಠೀಕೆಯ ಧ್ಯೆಯವನ್ನು ಪೂರೈಕೆಗಾಗಿ ಮತ್ತು ಮಾನವ ಹಕ್ಕುಗಳ ರಕ್ಷಣೆಗಾಗಿ ಸುಸ್ಥಿರ ಭಾರತ ಪುನರ್ ಸ್ಥಾಪನಾ ಅಧಿನಿಯಮ ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನಿರ್ದೇಶನ ನೀಡಬಹುದಾಗಿದೆ.

**<u>ಮುಂದು ವರೆದ ವಾದ ಮಂಡನೆ:-</u>**

I. ಭಾರತ ಒಕ್ಕೂಟದ ವಿರುದ್ಧ ದಾಖಲಿಸಿರುವ ರಿಟ್ ಅರ್ಜಿ ಕಾನೂನುಬದ್ಧ ವಿಚಾರಣಾರ್ಹವಾಗಿರುತ್ತದೆ.

**1) ಅರ್ಜಿದಾರ ಸಂಸ್ಥೆಯು ದಾಖಲಿಸಿರುವ ಭಾರತ ಒಕ್ಕೂಟು ವಿರುದ್ಧದ ರಿಟ್ ಅರ್ಜಿಯು ಸಂವಿಧಾನ ಬದ್ಧವಾಗಿದ್ದು, ವಿಚಾರಣಾರ್ಹವಾಗಿರುತ್ತದೆ.**

ಅ) ಸದರಿ ರಿಟ್ ಅರ್ಜಿಯು **"ಪರ್ಯಾಯ ಪರಿಹಾರದ"** ಕೊರತೆ ಇರುವ ಕಾರಣ

ಬ) ಮಾನವ ಮೂಲಭೂತ ಹಕ್ಕುಗಳ ಉಲ್ಲಂಘನೆ.

ಕ) ಸಂವಿಧಾನ ಬದ್ಧತೆ ಹೊಂದಿರುವ ಕಾರಣಕ್ಕಾಗಿ ಅರ್ಜಿದಾರ ಸಂಸ್ಥೆಯು ರಿಟ್ ಅರ್ಜಿಯನ್ನು ದಾಖಲಿಸಿರುತ್ತದೆ.

**<u>ಅ) ಪರ್ಯಾಯ ಪರಿಹಾರದ ಕೊರತೆ</u>**

2) ಅರ್ಜಿದಾರ ಸಂಸ್ಥೆಯು ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸುವದೆನೆಂದರೆ ಅರ್ಜಿದಾರರು ನೊಂದಾಯಿತ ಸರ್ಕಾರೇತರ ಸಂಘ ಸಂಸ್ಥೆ ಹೊಂದಿದವರಾಗಿದ್ದು, ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ನಿರೋದ್ಯೋಗ ಹೋಗಲಾಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ನಿವೃತ್ತರು ಸೇವೆಗೆ ಮರುನೇಮಕವಾಗದಂತೆ, ಏಕರೂಪದ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಮನವಿ ಮಾಡಿಕೊಂಡರೂ ಸರ್ಕಾರ ಜಾಣ ಮೌನವಹಿಸಿದ ಕಾರಣ ಯಾವುದೇ ಫಲಿತಾಂಶ ದೊರೆಯಲ್ಲಿಲ್ಲ. ಅರ್ಜಿದಾರರು ಪರ್ಯಾಯ ಪರಿಹಾರ ಕಂಡುಕೊಳ್ಳಲು ಆ ಮೂಲಕ ದೇಶದ ಅಭಿವೃದ್ಧಿಯನ್ನು ಸುಸ್ಥಿರಗೊಳಿಸಲು ಪ್ರಯತ್ನಿಸಿದರೂ, ಯಾವುದೇ ಪರಿಹಾರ ಲಭ್ಯವಾಗದ ಕಾರಣ ಸುಸ್ಥಿರ ಭಾರತ ಪುನರ್ ಸ್ಥಾಪನೆ ಗಗನ ಕುಸುಮದಂತಾಗಿರುತ್ತದೆ. ಹಾಗಾದ್ದರಿಂದ, ಅರ್ಜಿದಾರರು ಪರಿಹಾರ ಕೋರಿ ರಿಟ್ ಅರ್ಜಿಯನ್ನು ದಾಖಲಿಸಿರುತ್ತಾರೆ.

3) ಅರ್ಜಿದಾರರು ಮುಂದುವರೆದು ಘನ ನ್ಯಾಯಾಲಯದ ಮುಂದೆ ಗೌರವಪೂರ್ವಕವಾಗಿ ಸಲ್ಲಿಸುವುದೆನೆಂದರೆ ಯಂತ್ರ ನಾಗಾರಿಕತೆಯು ಮಾನವ ನಾಗರಿಕತೆಗೆ ಮಾರಕವಾಗಿರುತ್ತದೆ. ಮಾನವ ಬದುಕು ಬದುಕಲು ಮೀಸಲಾಗಿದ್ದು, ನಾಗರಿಕತೆ, ನಾಗರಿಕರಾಗಿ ಬದುಕಲು ಉದ್ಯೋಗ ಮೂಲ ಮಂತ್ರವಿದ್ದಂತೆ. ಈ ಉದ್ಯೋಗವೆಂಬ ಮೂಲಮಂತ್ರ ಇಲ್ಲದಿದ್ದರೆ ನಾಗರಿಕರು ಅನಾಗರಿಕರಾಗುತ್ತಾರೆ. ಸುಸಂಸ್ಕೃತೀಯು ನಾಶಗೊಳ್ಳುತ್ತದೆ. ಭಾರತ ಸಂವಿಧಾನದ ಪ್ರಸ್ತಾವಣೆಯಲ್ಲಿ ನಮೂದಿಸಿಸರುವ **"ಸಾಮಾಜಿಕ ನ್ಯಾಯ"** ವೆಂಬುದು ಮರಿಚಿಕೆಯಾಗಿ ಉಳಿಯುತ್ತದೆ. ಏಕರೂಪದ ಶಿಕ್ಷಣ ಪದ್ಧತಿಯು ಇಲ್ಲದೆ ದೇಶದಲ್ಲಿ ವಿಶ್ವವಿದ್ಯಾಲಯಗಳು, ನಿರೂದ್ಯೋಗಿಗಳನ್ನು ಉತ್ಪಾದಿಸುವ ಬೃಹತ್ ಕಾರಖಾನೆಗಳಾಗುತ್ತಿವೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುವುದು ಸರ್ಕಾರದ ಆದ್ಯ ಕರ್ತವ್ಯ. ಆದ್ದರಿಂದಲೆ ಸಂವಿಧಾನದ ಭಾಗ IV ರಲ್ಲಿ ನಿರ್ದೇಶಕ ತತ್ವಗಳನ್ನು ಬೋಧಿಸಲಾಗಿದೆ.

ಸರ್ಕಾರ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳದಿದ್ದಲ್ಲಿ ಮೂಲಭೂತ ಹಕ್ಕುಗಳಿಗೆ ಬೆಲೆಯೇ ಇರುವುದಿಲ್ಲ.

**ಬ) ಮಾನವ ಮೂಲಭೂತ ಹಕ್ಕುಗಳ ಉಲ್ಲಂಘನೆ**

4) ಅರ್ಜಿದಾರರು ಮುಂದುವರೆದು ಸಲ್ಲಿಸವುದೇನೆಂದರೆ ಸದರಿ ರಿಟ್ ಅರ್ಜಿಯಲ್ಲಿ ಮಾನವ ಮೂಲಭೂತ ಹಕ್ಕುಗಳ ಉಲ್ಲಂಘನೆಯ ಕಳಕಳಿಯನ್ನು ಹೊಂದಿರುತ್ತದೆ. ಭಾರತಿಯ ಸಂವಿಧಾನದ ಅನುಚ್ಛೇಧ 21 ಜೀವಿಸುವ ಹಕ್ಕು ಮಾನವನ ಮೂಲಭೂತ ಹಕ್ಕು ಎಂದು ಪ್ರತಿ ಪಾದಿಸುತ್ತದೆ.

**ಅಮೇರಿಕಾ ಸರ್ವೋಚ್ಚ ನ್ಯಾಯಾಲವು ಮೂನ್ ವಿರುದ್ದ ಹಿಲಿಯಸ್ ಪ್ರಕರಣದಲ್ಲಿ 1897 ಯುಎಸ್113 ಪ್ರಕರಣದಲ್ಲಿ** ಜಸ್ಟಿಸ್ ಫಿಲ್ಡ ರವರು ಜೀವ ಎಂಬ ಪದದ ಅರ್ಥವು ಈ ಕೆಳಗಿನಂತೆ ವ್ಯಾಖ್ಯಾನಿಸಿರುತ್ತಾರೆ:-

"ಜೀವ-ಪದದ ಅರ್ಥವು ಕೇವಲ ಪ್ರಾಣಿಗಳು ಬದುಕುಳಿಯುವಂತೆ ಮಾತ್ರವಾಗಿರದೆ ಅದು ವಿಸ್ತ್ರತ ಅರ್ಥವನ್ನು ಹೊಂದಿರುತ್ತದೆ." ಎಂದು ವಿವರಿಸಿರುತ್ತಾರೆ. ಹಾಗಾದ್ದರಿಂದ ಮಾನ್ಯ ನ್ಯಾಯಾಲಯವು ಈ ಅಂಶಗಳನ್ನು ಪರಿಗಣಿಸಬೇಕು. ಅದೇ ರೀತಿಯಾಗಿ **ಓಲ್ಗಾ ಟೇಲಿಸ್ ವಿರುದ್ದ ಬಾಂಬೆ ಮುನ್ಸಿಫಲ್ ಕಾರ್ಪೋರೇಶನ** AIR 1986 SC 180 ರಲ್ಲಿ ಅನುಚ್ಛೇಧ 21 ರಡಿಯಲ್ಲಿ "ಜೀವದ ಹಕ್ಕು ಎಂಬುದು ಜೀವನೋಪಾಯದ ಹಕ್ಕನ್ನು ಒಳಗೊಂಡಿದೆ" ಎಂದು ವಿವರಿಸಿರುತ್ತದೆ. ಆದರೆ ಉದ್ಯೋಗವೆ ಇಲ್ಲದಿದ್ದಲ್ಲಿ ನಿರೂದ್ಯೋಗಿಗಳಾಗಿ ಅಲೆದಾಡುವವರೆಗೆ ಜೀವನೋಪಾಯದ ಹಕ್ಕು ಕೇವಲ ಪುಸ್ತಕದಲ್ಲಿರುವ ವೆದಾಂತವೇ ಸರಿ.

ಸದರಿ ರಿಟ್ ಅರ್ಜಿಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಸ್ಪಷ್ಟವಾಗಿ ಗೋಚರಿಸುತ್ತದೆ. ಹಾಗಾದ್ದರಿಂದ, ಸದರಿ ರಿಟ್ ಅರ್ಜಿಯು ಸಂವಿಧಾನ ಬದ್ದವಾಗಿದ್ದು ವಿಚಾರಣಾರ್ಹವಾಗಿರುತ್ತದೆ.

ಅದೇ ರೀತಿಯಾಗಿ ಸಂವಿಧಾನ ಅನುಚ್ಛೇಧ 14 ಸಮಾನತೆ ತತ್ವವನ್ನು ಕುರಿತು ವಿವರಿಸುತ್ತದೆ. ಸರ್ವರು ಸಮಾನ ಭಾಳ್ವೆಯನ್ನು ಅನುಭವಿಸುವ ಉದ್ದೇಶವನ್ನು ಬಿಂಬಿಸುತ್ತದೆ. ಈ ಅನುಚ್ಛೇದದ ಪ್ರಮುಖ ಉದ್ದೇಶವೇ ಎಲ್ಲರೂ ಸಮಾನರೆಂದರ್ಥ ತಾರ್ಯತಮ್ಯವನ್ನು ಇದು ನಿಷೇಧಿಸುತ್ತದೆ. ಸರ್ವೋಚ್ಚ ನ್ಯಾಯಾಲಯವು **ಕೆ.ತಿಮ್ಮಪ್ಪ ವಿರುದ್ದ ಕೇಂದ್ರ ಸಮಿತಿಯ ನಿರ್ದೇಶಕರು ಎಸ್.ಬಿ.ಆಯ್. ಎ.ಆಯ್.ಆರ್ 2001, ಎಸ್.ಸಿ. 467** ರಲ್ಲಿ ಅನುಚ್ಛೇಧ 14 ತಾರ್ಯತಮ್ಯವನ್ನು ನಿಷೇಧಿಸುತ್ತದೆಂದು ಮತ್ತು ಸಮಾನತೆಯನ್ನು ಬೋಧಿಸುತ್ತದೆ ಎಂದು ನಿರ್ದೇಶಿಸಿರುತ್ತದೆ.

ಅದೇ ರೀತಿಯಾಗಿ **ಎಲ್ಕೆಟ್ರಿಕಲ್ ಕಸ್ಟ್ರಕ್ಷನ್ ಲಿಮಿಟೆಡ್ ವಿರುದ್ದ ಎಸ್.ಸಿ. ಬೋಸ** ಈ ಪ್ರಕರದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಾಮಾಜಿಕ ಮತ್ತು ಆರ್ಥಿಕ ನ್ಯಾಯವು ಮೂಲಭೂತ ಹಕ್ಕಾಗಿರುತ್ತದೆ ಎಂದು ನಿರ್ಧರಿಸಿರುತ್ತದೆ.

**ಕ) ಸಂವಿಧಾನ ಬದ್ಧತೆ:**

5) ಅರ್ಜಿದಾದರು ಘನ ನ್ಯಾಯಾಲಯದ ಮುಂದೆ ಗೌರವಪೂರ್ವಕ ಸಲ್ಲಿಸುವುದೆನೆಂದರೆ ಅರ್ಜಿದಾರರ ರಿಟ್ ಅರ್ಜಿಯು ಸಂವಿಧಾನದ ಅನುಚ್ಛೇಧ-32, ಖಂಡ 1 ರಲ್ಲಿ ದಾಖಲಾಗಿದ್ದು ಇರುತ್ತದೆ.

ಅನುಚ್ಛೇಧ-32 ಖಂಡ 1 ಈ ಕೆಳಗಿನಂತೆ ವಿವರಿಸುತ್ತದೆ.

"ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳನ್ನು ಜಾರಿಗೊಳಿಸುವದಕ್ಕಾಗಿ ಸಮೂಚಿತ ವ್ಯವಹರಣಿಗಳ ಮೂಲಕ ಸರ್ವೋಚ್ಚ ನ್ಯಾಯಾಲಯವನ್ನು ಕೋರುವ ಹಕ್ಕನ್ನು ಖಾತರಿಗೊಳಿಸಲಾಗಿದೆ.

ಕಾರಣ ಅರ್ಜಿದಾರರು ದಾಖಲಿಸಿರುವ ರಿಟ ಅರ್ಜಿ ಸಂವಿಧಾನ ಬದ್ಧವಾಗಿರುತ್ತದೆ.

**ಫರ್ಟಿಲೈಜರ ಕಾರ್ಪೋರೇಶನ್ ಕಾಮಗಾರ ಸಂಘ ವಿರುದ್ಧ ಭಾರತ ಒಕ್ಕೂಟ ಎಐಆರ್ 1981 ಎಸ್‌ಸಿ 344,** ರಲ್ಲಿ ಸರ್ವೋಚ್ಚ ನ್ಯಾಯಾಲಯವು "ಮೂಲಭೂತ ಹಕ್ಕುಗಳ ಜಾರಿಗಾಗಿ ಸರ್ವೋಚ್ಚ ನ್ಯಾಯಾಲಯವನ್ನು ಕೋರುವ ಹಕ್ಕು ಸಹ ಮೂಲಭೂತ ಹಕ್ಕಾಗಿರುತ್ತದೆ" ಎಂದು ನಿರ್ಧರಿಸುತ್ತದೆ. ಹಾಗಾದ್ದರಿಂದ, ಅರ್ಜಿದಾರರು ಸಹ ಇಂತಹ ಮೂಲಭೂತ ಹಕ್ಕನ್ನು ಹೊಂದಿದ್ದು ಈ ಹಕ್ಕಿನಡಿಯಲ್ಲಿಯೇ ಮಾನ್ಯ ನ್ಯಾಯಾಲಯದ ಮುಂದೆ ರಿಟ್ ಅರ್ಜಿದಾಖಲಿಸಿದ್ದು ಸಂವಿಧಾನ ಬದ್ಧವಾಗಿದ್ದು ವಿಚಾರಣಾರ್ಹವಾಗಿರುತ್ತದೆ.

**II. ನ್ಯಾಯಾಲಯವು ಇಂಥ ರಿಟ್ ಅರ್ಜಿ ವಿಚಾರಣೆಯ ನ್ಯಾಯಿಕ ವ್ಯಾಪ್ತಿ ಹೊಂದಿರುತ್ತದೆ.**

6) ಮಾನ್ಯ ನ್ಯಾಯಾಲಯವು ಅರ್ಜಿದಾರರು ದಾಖಲಿಸಿರುವ ರಿಟ್ ಅರ್ಜಿಯ ವಿಚಾರಣೆ ನಡೆಸುವ ನ್ಯಾಯಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ

ಕಾರಣ:

ಅ) ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ.

ಬ) ಅಸಲು ಅಧಿಕಾರ ವ್ಯಾಪ್ತಿ ಅನುಚ್ಛೇಧ 131.

ಕ) ರಿಟ್ ನಿರ್ದೇಶನಗಳ ಪರಿಹಾರ ನೀಡುವ ವ್ಯಾಪ್ತಿ ಹೊಂದಿದ್ದು, ಮಾನ್ಯ ನ್ಯಾಯಾಲಯವು ಸದರಿ ರಿಟ್ ಅರ್ಜಿ ವಿಚಾರಣೆ ಮಾಡುವ ನ್ಯಾಯಿಕ ವ್ಯಾಪ್ತಿ ಹೊಂದಿರುತ್ತದೆ.

**ಅ) ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ**

7) ಸರ್ವೋಚ್ಚ ನ್ಯಾಯಾಲಯವು ಕಾರ್ಯವ್ಯಾಪ್ತಿಯನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

ಇದೊಂದು ಅಭಿಲೇಖ ನ್ಯಾಯಾಲಯ, ಅಸಲು ಅಧಿಕಾರವ್ಯಾಪ್ತಿ, ಅಪೀಲು ಅಧಿಕಾರ ವ್ಯಾಪ್ತಿ, ವಿಶೇಷ ಅನುಮತಿಯೊಂದಿಗೆ ಅಪೀಲು ಮತ್ತು ಸಲಹಾ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ. ಹೀಗೆ ಎಲ್ಲ ಸ್ವರೂಪದ ಪ್ರಕರಣಗಳನ್ನು ವಿಚಾರಣೆಗೆ ಕೈಗೊಳ್ಳುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

ಬ) ಅಸಲು ಅಧಿಕಾರವ್ಯಾಪ್ತಿ ಅನುಚ್ಛೇದ 131.

8) ಅರ್ಜಿದಾರರು ಘನ್ ನ್ಯಾಯಾಲಯದ ಮುಂದೆ ಸಲ್ಲಿಸುವುದೆನೆಂದರೆ ಭಾರತ ಸಂವಿಧಾನದ ಅನುಚ್ಛೇಧ 131 ರಡಿಯಲ್ಲಿ ಮೂಲಭೂತ ಹಕ್ಕುಗಳ ಜಾರಿಗೊಳಸುವಿಕೆಗೆ ಅನುಚ್ಛೇಧ 32 ರಡಿಯಲ್ಲಿ ಮೂಲಭೂತ ಹಕ್ಕುಗಳನ್ನು ಜಾರಿಗೊಳಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅಸಲು ಅಧಿಕಾರ ವ್ಯಾಪ್ತಿಯನ್ನು ನೀಡಿದೆ.

ಹಾಗಾದ್ದರಿಂದ, ಸದರಿ ಅರ್ಜಿದಾರ ದಾಖಲಿಸಿರುವ ರಿಟ್ ಅರ್ಜಿಯ ವಿಚಾರಣಾ ನಡೆಸುವ ನ್ಯಾಯಿಕ ಅಧಿಕಾರವ್ಯಾಪ್ತಿಯು ಮಾನ್ಯ ನ್ಯಾಯಾಲಯವು ಹೊಂದಿರುತ್ತದೆ.

ಕ) ರಿಟ್ ನಿರ್ದೇಶನಗಳ ಪರಿಹಾರ ನೀಡುವ ವ್ಯಾಪ್ತಿ.

9) ಅರ್ಜಿದಾರರು ಗೌರವ ಪೂರ್ವಕವಾಗಿ ಸಲ್ಲಿಸುವುದೆನೆಂದರೆ ಸಂವಿಧಾನದ 32ನೇ ಅನುಚ್ಛೇಧವು ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು ಅಧಿಕಾರವನ್ನು ನೀಡಿ ಯಾವುದೇ ವ್ಯಕ್ತಿಯ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ ಅವನು ಸರ್ವೋಚ್ಚ ನ್ಯಾಯಾಲಯಕ್ಕೆ ಪರಿಹಾರವನ್ನು ನೀಡುವಂತೆ ಕೊರಬಹುದಾಗಿದೆ ಹಾಗೂ ಖಂಡ 2 ಅನುಚ್ಛೇಧ 32 ರಡಿಯಲ್ಲಿ ಸರ್ವೋಚ್ಚ ನ್ಯಾಯಾಲಯ ಸೂಕ್ತವಾದ ನಿರ್ದೇಶನಗಳನ್ನು ಆಜ್ಞೆಗಳನ್ನು ಅಲ್ಲದೆ ಅವಶ್ಯವಾದ ರಿಟ್ ನಿರ್ದೇಶನಗಳನ್ನು ಸಹ ನೀಡಬಹುದಾಗಿದೆ.

16) ಅರ್ಜಿದಾರರು ಮುಂದುವರೆದು ಘನ್ ನ್ಯಾಯಾಲಯದ ಮುಂದೆ ಸಲ್ಲಿಸುವುದೆನೆಂದರೆ ಭಾರತ ಒಕ್ಕೂಟ **"ಸುಸ್ಥಿರ ಭಾರತ ಪುನರ್ ಸ್ಥಾಪನಾ ಅಧಿನಿಯಮ"** ಜಾರಿಗೊಳಸದ ಹೊರತು, ಬಡತನ, ನಿರೂದ್ಯೋಗ, ನೌಕರರಿಗೆ ಅಸಮಾನ ಸಂಭಾವಣೆ, ಏಕರೂಪದ ಶಿಕ್ಷಣದ ಕೊರತೆ, ಕೃಷಿ ಉತ್ಪಾದನೆಗಳಗೆ ಬೆಂಬಲರಹಿತ ಬೆಲೆ ಮತ್ತು ಅತಿಯಾದ ಯಂತ್ರಗಳ ಬಳಕೆ, ಸಂಪೂರ್ಣವಾಗಿ ಹೊಡೆದು ಹಾಕಲು ಅಸಾಧ್ಯವಾಗಿರುತ್ತದೆ.

"ಸರ್ವೋಚ್ಚ ನ್ಯಾಯಾಲವು **ರಂಜನ ದ್ವಿವೇದಿ ವಿರುದ್ಧ ಭಾರಾತ ಒಕ್ಕೂಟ ಎಐಆರ್ 1983 ಎಸ್‌ಸಿ 224,** ರಲ್ಲಿ ಈ ಕೆಳಗಿನಂತೆ ವಿವರಿಸಿರುತ್ತದೆ.

ಕಾನೂನಿನ ನೇರವು ಮತ್ತು ಸಮಾನ ನ್ಯಾಯವು ಸಾಮಾಜಿಕ ಧ್ಯೆಯೊದ್ದೇಶಗಳನ್ನು ಒಳಗೊಂಡಿದ್ದು ಇವುಗಳ ಜಾರಿಗಾಗಿ ಸೂಕ್ತವಾದ ಶಾಸನವನ್ನು ತರುವುದರ ಮೂಲಕ ಜಾರಿಗೊಳಸಬಹುದೆಂದು ಹೇಳದೆ. ಹಾಗಾದ್ದರಿಂದ, ಮಾನ್ಯ ನ್ಯಾಯಾಲಯವು ಈ ಅಂಶವನ್ನು ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅದೇ ರೀತಿಯಾಗಿ, ಪ್ರಕರಣವು ಸಾರ್ವಜನಿಕ ಹಿತಾಸಕ್ತಿ ಹೊಂದಿದ್ದಲ್ಲಿ ಭಾರತ ಒಕ್ಕೂಟಕ್ಕೆ ಅಧಿನಿಯಮ ಜಾರಿಗೊಳಸುವಂತೆ ಸಲಹೆ ನೀಡಬಹುದಾಗಿದೆ.

ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಮೂರ್ತಿಗಳಾದ ಮಾನ್ಯ **ದೀಪಕ ಮಿಶ್ರಾ**ರವರು ವಿವರಿಸಿರುವಂತೆ:

"ಸರ್ವೋಚ್ಚ ನ್ಯಾಯಲಯವು ಸಂಸತ್ತಿಗೆ ಅಭ್ಯರ್ಥಿಗಳ ಅಪರಾಧಿಕರಣಕ್ಕೆ ಸಂಬಂಧಿಸಿದಂತೆ ಅಪರಾದ ಹಿನ್ನಲೆವುಳ್ಳ ಅಭ್ಯರ್ಥಿಗಳು ಸಾರ್ವಜನಿಕ ಜೀವನ ಪ್ರವೇಶಿಸಿದಂತೆ ಸೂಕ್ತ ಕಾನೂನು ರೂಪಿಸಲು ನಿರ್ದೇಶನ ·ನೀಡಬಹುದಾಗಿದೆ ಆ ಮೂಲಕ ಶಾಸನ ರೂಪಿಸುವಲ್ಲಿ ಭಾಗಿಯಾಗಬಹುದಾಗಿದೆ ಎಂದು ವಿವರಿಸಿರುತ್ತಾರೆ.

**III. ರಿಟ್ ಅರ್ಜಿ ಸಾರ್ವಜನಿಕ ಹಿತಾಸಕ್ತಿ ಹೊಂದಿರುತ್ತದೆ.**

10) ಅರ್ಜಿದಾರರು ಮಾನ್ಯ ನ್ಯಾಯಾಲಯಕ್ಕೆ ಗೌರವ ಪೂರ್ವಕ ಸಲ್ಲಿಸುವುದೆನೆಂದರೆ ಸದರಿ ರಿಟ್ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಹೊಂದಿರುತ್ತದೆ. ಕಾರಣ: ಸದರಿ ರಿಟ್ ಅರ್ಜಿಯು

ಅ) ಅಹವಾಲು ಹೇಳಿಕೊಳ್ಳುವ ಹಕ್ಕು

ಬ) ಸಾರ್ವಜನಿಕ ಹಿತಾಸಕ್ತಿ ಸದರಿ ಅರ್ಜಿದಾರರು ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ಈ ಅಂಶಗಳು ಒಳಗೊಂಡಿರುತ್ತದೆ.

**ಅ) ಅಹವಾಲು ಹೇಳಿಕೊಳ್ಳುವ ಹಕ್ಕು.**

11) ಅರ್ಜಿದಾರರು ಘನ್ ನ್ಯಾಲಾಯಯದ ಮುಂದೆ ಗೌರವ ಪೂರ್ವಕವಾಗಿ ಸಲ್ಲಿಸುವುದೆನೆಂದರೆ "**ಗೌರವಾನ್ವಿತ ಜಸ್ಟಿಸ ಭಗವತಿರವರು** ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿರುವ ಪತ್ರಗಳ ಮೂಲಕ ಕೊರುವ ಅರ್ಜಿಗಳನ್ನು ಎಪಿಸ್ಟೋಲರಿ ನ್ಯಾಯಾಧಿಕಾರ ವ್ಯಾಪ್ತಿಯ ಮೂಲಕ ಅಹವಾಲು ಹೇಳಿಕೊಳ್ಳುವ ಹಕ್ಕಿನ ಬಗ್ಗೆ ಚರ್ಚಿಸಬಹುದೆಂದು ವಿವರಿಸಿರುತ್ತಾರೆ."

**ಎ.ಕೆ. ಪಾಂಡೆ ವಿರುದ್ದ ಸ್ಟೇಟ ಆಫ್ ಪಶ್ಚಿಮ ಬಂಗಾಳ ರಾಜ್ಯ ಎಐಆರ್ 2004 ಎಸ್‌ಸಿ 280,** ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯದ ಕುರಿತು ಈ ಕೆಳಗಿನಂತೆ ನಿರ್ದರಿಸಿರುತ್ತದೆ:

"ಸಾರ್ವಜನಿಕ ಹಿತಾಸಕ್ತಿ ಅರ್ಜಿ ಯಾವುದೇ ಕಾರಣಕ್ಕು ವೈಯಕ್ತಿಕ ಲಾಬಕ್ಕೆ ಹಾಗು ರಾಜಕೀಯ ಬೆಳವಣಿಗೆಗೆ ಅಥವಾ ಯಾವುದೇ ನೀತಿಬ್ರಷ್ಟ ಪ್ರತಿಫಲಕ್ಕೆ ದುರುಪಯೋಗವಾಗುವಂತಿಲ್ಲ ಎಂದು ನಿರ್ಧರಿಸಿರುತ್ತದೆ".

ಹಾಗಾದ್ದರಿಂದ, ಸದರಿ ರಿಟ್ ಅರ್ಜಿಯಲ್ಲಿ ಅರ್ಜಿದಾರರು ಕೋರಿರುವ ಪರಿಹಾರದಲ್ಲಿ ಯಾವುದೇ ವೈಯಕ್ತಿಕ ಲಾಭ ಇಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

**ಬ) ಸಾರ್ವಜನಿಕ ಹಿತಾಸಕ್ತಿ**

12) ಸದರಿ ರಿಟ್ ಅರ್ಜಿಯಲ್ಲಿ ಅರ್ಜಿದಾರರು ದೇಶ ಎದುರಿಸುತ್ತಿರುವ ಗಂಬೀರ ಸಮಸ್ಯೆಗಳಾದ ಏಕರೂಪದ ಶಿಕ್ಷಣದ ಕೊರತೆ ಕೃಷಿ ಅಬಿವೃದ್ದಿ ಮಾರುಕಟ್ಟೆ ಮತ್ತು

ಕನಿಷ್ಠ ಬೆಂಬಲ ಬೆಲೆ ನಿಗಧಿಗೊಳಿಸುವಿಕೆ ಸರ್ವರಿಗೂ ಸಮಾನ ಸಂಬಾವನೆ ಮತ್ತು ಅತಿಯಾದ ಯಂತ್ರ ಬಳಕೆ ಇಂಥಹ ಪಡುಗಳನ್ನು ನಾಶಗೊಳಿಸುವುದಕ್ಕಾಗಿ ಆ ಮೂಲಕ ಮಾನವ ಬದುಕನ್ನು ಸಮೃದ್ಧಗೊಳಿಸುವ ಸಧಿಚ್ಛೆಯಿಂದ ಅರ್ಜಿಯನ್ನು ದಾಖಲಿಸಿದ್ದು ಹೊರತು, ಯಾವುದೇ ವ್ಯೆಯಕ್ತಿಕ ಲಾಬದ ನೆಲೆಯಲ್ಲಿಲ್ಲ.

13) ಅರ್ಜಿದಾರರು ಸಲ್ಲಿಸುವದೇನೆಂದರೆ ಸದರಿ ರಿಟ್ ಅರ್ಜಿಯು ಸ್ಪಷ್ಟವಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದರುತ್ತದೆ.

**ಎಸ್. ಪಿ. ಗುಪ್ತಾ ಮತ್ತು ಇತರರ ವಿರುದ್ಧ ಭಾರತ ಒಕ್ಕೂಟು ಎಐಆರ್ 1982 ಎಸ್‌ಸಿ 149.**

ಈ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಸಿದಂತೆ ನಿಯಮವನ್ನು ದೃಡೀಕರಿಸುತ್ತಾ ಮುಖ್ಯ ನ್ಯಾಯಾಮೂರ್ತಿಗಳಾದ **ದಿ.ಮಾನ್ಯ ಭಗವತಿಯವರು** ಈ ಕೆಳಗಿನಂತೆ ಉಲ್ಲೇಖಿಸಿರುತ್ತಾರೆ.

"ಯಾವುದೇ ವ್ಯೆಕ್ತಿಗೆ ಸಂಬಂಧಿಸಿದ ಅಥವಾ ವ್ಯಕ್ತಿಗಳ ಸಮೂಹಕ್ಕೆ ಸಂಬಂಧಿಸಿದ ಸಂವಿಧಾನಿಕ ಹಕ್ಕಿನ ಅಥವಾ ಕಾನೂನು ಬದ್ದ ಹಕ್ಕಿನ ಉಲ್ಲಂಘನೆಯಾದಾಗ ಆ ವ್ಯಕ್ತಿ ಅಥವಾ ಆ ವ್ಯಕ್ತಿಗಳ ಬಡತನ, ಅಸಹಾಯಕತೆ ಅಥವಾ ಸಾಮಾಜಿಕವಾಗಿ ಇಲ್ಲವೆ ಆರ್ಥಿಕವಾಗಿ ಹಿಂದೂಳಿದ ಪರಿಸ್ಥಿತಿಯಿಂದಾಗಿ ಪರಿಹಾರ ಪಡೆಯಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಸಾಧ್ಯವಾಗದಿದ್ದರೆ, ಯಾವುದೇ ವ್ಯಕ್ತಿ ಅವನ ಪರವಾಗಿ ಅನುಚ್ಛೇಧ 226 ರಡಿಯಲ್ಲಿ ಉಚ್ಚನ್ಯಾಯಾಲಯಕ್ಕೆ ಅರ್ಜಿಸಲ್ಲಿಸಬಹುದು. ಅದೇ ರೀತಿಯಾಗಿ ಅನುಚ್ಛೇಧ 32 ರಡಿಯಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದೆಂದು ನಿರ್ಧರಿಸಲಾಗಿರುತ್ತದೆ.

ಹಾಗಾದ್ದರಿಂದ, ಸದರಿ ರಿಟ್ ಅರ್ಜಿಯ ಸಹ ಈಗಾಗಲೆ ನಮೂದಿಸಿರುವ ಮೇಲಿನ ಪ್ರಕರಣಗಳಲ್ಲಿರುವ ವ್ಯಕ್ತಿಗಳ ಸಮೂಹಕ್ಕೆ ಸಂಬಂಧಿಸಿದ ಹಕ್ಕುಗಳಾಗಿದ್ದು ಸಾರ್ವಜನಿಕ ಹಿತಾಸಕ್ತಿ ಹೊಂದಿರುತ್ತದೆ.

14) ಅದೇ ರೀತಿಯಾಗಿ, **ಎಮ್.ಸಿ. ಮೇಹತಾ ವಿರುದ್ಧ, ಭಾರತ ಒಕ್ಕೂಟ ಎಐಆರ 1987 ಎಸ್.ಸಿ 1087,** ರಲ್ಲಿ ಜಸ್ಟಿಸ ಭಗವತಿಯವರು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸಲಹೆಗಳನ್ನು ನೀಡಿರುತ್ತಾರೆ.

1) ಬಡತನವಿರುವ ಭಾರತದಂತಹ ರಾಷ್ಟ್ರದಲ್ಲಿ ವ್ಯಕ್ತಿಗಳ ಹಕ್ಕುಗಳ ಜಾರಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಪತ್ರ ಬರೆಯುವ ಮೂಲಕ ಸಹ ಪರಿಹಾರವನ್ನು ಪಡೆಯಬಹುದು.

2) ಸಂವಿಧಾನದ ಅನುಚ್ಚೇಧ 32 ರಲ್ಲಿ ಪರಿಹಾರ ಪಡೆಯುವ ಅಧಿಕಾರವು ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ನಷ್ಟ ಪರಿಹಾರವನ್ನು ಪಡೆಯುವದನ್ನು ಒಳಗೊಂಡಿರುತ್ತದೆ.

3) ಅನಕ್ಷರಸ್ತರು, ಬಡವರ ಮೂಲಭೂತ ಹಕ್ಕುಗಳ ಜಾರಿಗಾಗಿ ಸರ್ವೋಚ್ಚ ನ್ಯಾಯಾಲಯವು ಆಯೋಗಗಳನ್ನು ನೇಮಕ ಮಾಡುವುದರ ಮೂಲಕ ಜಾರಿಗೊಳಿಸಬಹುದು ಮತ್ತು ಪರಿಹಾರ ನೀಡಬಹುದು ಎಂದು ಅಭಿಪ್ರಾಯಪಟ್ಟಿರುತ್ತದೆ. ಹಾಗಾದ್ದರಿಂದ, ಸದರಿ ರಿಟ್ ಅರ್ಜಿಯ ಬಡವರ, ನಿರುದ್ಯೋಗಿಗಳ ಬದುಕನ್ನು ಹಸನಗೊಳಿಸಲು ಅಂತಹ ವ್ಯಕ್ತಿಗಳ ಪರವಾಗಿ ಸದರಿ ರಿಟ್ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

## IV. ಸುಸ್ಥಿರ ಭಾರತ ಪುನರ್ ಸ್ಥಾಪನಾ ಅಧಿನಿಯಮ ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನಿರ್ದೇಶನ ನೀಡಬಹುದು.

15) ಅರ್ಜಿದಾರರು ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸುವುದೇನೆಂದರೆ ಸದರಿ ರಿಟ್ ಅರ್ಜಿಯು 10ನೇ ತರಗತಿಯ ಶಿಕ್ಷಣದ ವ್ಯವಸ್ಥೆಯನ್ನು ನಿಯಂತ್ರಿಸಿ ಏಕರೂಪದ ಶಿಕ್ಷಣ ನೀತಿಯ ಕಕ್ಷೆಯಲ್ಲಿ ತರುವುದಕ್ಕಾಗಿ,

ಕೃಷಿ ಉತ್ಪನ್ನಗಳಿಗೆ ನಿಯಂತ್ರಿತ ಮಾರುಕಟ್ಟೆ ಮತ್ತು ಕನಿಷ್ಠ ಬೆಲೆ ನಿಗಧಿಗಾಗಿ ಸಂವಿಧಾನದ ಧ್ಯೇಯವಾದ ಸಮಾನತೆ ಸಹಕಾರಗೊಳಿಸಲು ಸಮಾನ ಸಂಭಾವನೆ ಮತ್ತು ಯಂತ್ರಗಳ ಬಳಕೆ ನಿಷೇದಿಸಿ ಗೃಹ ಮತ್ತು ಕರಕುಶಲ ಕೈಗಾರಿಕಗಳಿಗೆ ಆರ್ಥಿಕ ಸಹಾಯ, ಬೆಂಬಲ ಬೆಲೆ ಇವೆಲ್ಲವುಗಳನ್ನು ಪೂರೈಸುವುದು ಸರ್ಕಾರದ ಆದ್ಯ ಕರ್ತವ್ಯ. ಆದರೆ, ಈಗಾಗಲೆ ವಿವರಿಸಿರುವಂತೆ ಅರ್ಜಿದಾರರು ಈ ಎಲ್ಲ ಅಂಶಗಳನ್ನು ಸಾಕಾರಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿಕೊಂಡರೂ ಸಹ ಯಾವುದೇ ಪರಿಹಾರ ದೊರೆತಿರುವುದಿಲ್ಲ.

ಆದಕಾರಣ ದೇಶದಲ್ಲಿ ದಿನದಿಂದ ದಿನಕ್ಕೆ ನಿರುದ್ಯೋಗ, ಯಂತ್ರಗಳ ಬಳಕೆ, ಕೃಷಿ ಉತ್ಪನಕ್ಕೆ ಬೆಂಬಲ ಬೆಲೆಗಳ ಕೊರತೆ, ನೌಕರರಿಗೆ ಸಂಬಾವನೆಯಲ್ಲಿ ತಾರತಮ್ಯತೆ ಮತ್ತು ಗೃಹ & ಕರಕುಶಲ ಉದ್ಯಮಿಗಳಿಗೆ ಮಾರಕವಾದ ಯಂತ್ರಗಳ ಬಳಕೆ ಅಧಿಕವಾಗುತ್ತಿದೆ- 2019 ಫೆಬ್ರುವರಿ ತಿಂಗಳ ಅಂಕಿ ಅಂಶಗಳ ಪ್ರಕಾರ 6.1% ಪ್ರತಿಷತ್‌ದಷ್ಟು ನಿರುದ್ಯೋಗ ಅಧಿಕವಾಗಿರುತ್ತದೆ. ಕಳೆದ ವರ್ಷಗಳಿಗಿಂತ ಇದು ಅಧಿಕ ಮಟ್ಟದಲ್ಲಿರುತ್ತದೆ.

ಕಾರಣ ಅರ್ಜಿದಾರರು ಸಲ್ಲಿಸಿರುವ ಆಶಯಗಳನ್ನು ಜಾರಿಗೊಳುಸುವುದಕ್ಕಾಗಿ ಸುಸ್ಥಿರ ಭಾರತ ಪುನರ್ ಸ್ಥಾಪನಾ ಅಧಿನಿಯಮ ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ.

# ಪ್ರಾರ್ಥನೆ

ಗೌರವಾನ್ವಿತ ನ್ಯಾಯಾಲಯದ ಮುಂದೆ ವಿನಂತಿಪೂರ್ವಕವಾಗಿ ಅರ್ಜಿದಾರರ ಪರವಾಗಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸದರಿ ಮೇಲ್ಕಂಡ ವಿವಾದಾಂಶಗಳ ಆಧಾರದ ಮೇಲೆ ವ್ಯಕ್ತಪಡಿಸಿರುವ ವಾದ ಮಂಡನೆ ಮತ್ತು ಸರ್ವೋಚ್ಚ ನ್ಯಾಯಾಲಯದ ಉಲ್ಲೇಖಿಸಲಾದ ತೀರ್ಪುಗಳ ಆಧಾರದ ಮೇಲೆ ಈ ಕೆಳಕಂಡ ಪರಿಹಾರಗಳನ್ನು ಘೋಷಿಸಿ ನಿರ್ದೇಶಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

1) ಅರ್ಜಿದಾರರು ದಾಖಲಿಸಿರುವ ರಿಟ್ ಅರ್ಜಿಯು ವಿಚಾರಣಾರ್ಹವಾಗಿದ್ದು

2) ಗೌರವಾನ್ವಿತ ನ್ಯಾಯಾಲಯವು ಸದರಿ ರಿಟ್ ಅರ್ಜಿ ವಿಚಾರಣೆ ಮಾಡುವ ನ್ಯಾಯಾಧಿಕಾರ ವ್ಯಾಪ್ತಿ ಹೊಂದಿದ್ದು.

3) ರಿಟ್ ಅರ್ಜಿಯು ಸಾರ್ವಜನಿಕ ಹಿತಾಸಕ್ತಿ ಹೊಂದಿದೆ ಎಂದು ನಿರ್ದೇಸಿಸುವ ಮೂಲಕ "ಸುಸ್ಥಿರ ಭಾರತ ಪುನರ್ ಸ್ಥಾಪನಾ ಅದಿನಿಯಮ ಜಾರಿಗೊಳಿಸುವಂತೆ ಭಾರತ ಒಕ್ಕೂಟಕ್ಕೆ ನಿರ್ದೇಶನ ನೀಡುವುದರೊಂದಿಗೆ ಅರ್ಜಿದಾರ ಸಲ್ಲಿಸಿರುವ ವಿಷಯಗಳ ಸಮಸ್ಯೆ ಸಂಪೂರ್ಣವಾಗಿ ಹೋಗಲಾಡಿಸಿ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ಧ್ಯೇಯದ ಸಾಕಾರಗೊಳಿಸುವುದು ನ್ಯಾಯ ಮತ್ತು ನೀತಿ ಹಿತದೃಷ್ಟಿಯಿಂದ ಅವಶ್ಯವಿರುತ್ತದೆ.

**ಅರ್ಜಿದಾರ ಪರ ವಕೀಲರು**